# ಕೊರತೆಯನ್ನು ನೀಗಿ ಅಭಿನಯಿಸಬೇಕು



## ಹೇಮಾ ಪ್ರಭಾತ್
### ಕಲರ್ಸ್ ಕನ್ನಡದ 'ಕರಿಮಣಿ' ಅನುರಾಧಾ

◆ **ಅಭಿನಯಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದು ಏಕೆ?**

ಪ್ರಭಾತ್ ಕಲಾವಿದರ ಕುಟುಂಬದಲ್ಲಿ ನಾನು ಹುಟ್ಟಿದ್ದು. ಕಲೆ ಅನ್ನುವುದು ಜನ್ಮಜಾತವಾಗಿ ಬಂದಿದೆ. ಶಾಲಾ ದಿನಗಳಲ್ಲೇ ಕಲೆ ಮೊದಲಾಗಿ ಓದು ನಂತರದ್ದಾಗಿತ್ತು. ಇಡೀ ಕುಟುಂಬ ನೃತ್ಯ, ಗಾಯನ, ನಾಟಕದಲ್ಲಿ ತೊಡಗಿಕೊಂಡಿತ್ತು. ಅದೇ ನಮ್ಮ ಜೀವನ ಎಂಬ ಭಾವನೆಯಲ್ಲೇ ಬೆಳೆದಿದ್ದೇನೆ. ನಾನೂ ನೃತ್ಯ–ನಟನೆಯನ್ನು ಮಾಡಿಕೊಂಡು ಓದಿದೆ. ಮೊದಲು ನಮ್ಮ ತಾತನ ಸಿನಿಮಾದಲ್ಲೇ ಮಾಡಿದ್ದೆ, ಅದು ತೆರೆಕಾಣಲಿಲ್ಲ. ನಂತರ ಹುಣಸೂರು ಕೃಷ್ಣಮೂರ್ತಿ ಅವರ 'ಭಕ್ತ ಜ್ಞಾನದೇವ' ಸಿನಿಮಾದಲ್ಲಿ ಜ್ಞಾನದೇವನ ತಂಗಿಯ ಪಾತ್ರವನ್ನು ನಿರ್ವಹಿಸಿದ್ದೆ. ಡಾನ್ಸ್ ಕೂಡ ಮಾಡುತ್ತೇನೆ ಎಂಬ ಕಾರಣಕ್ಕೆ ನನಗಾಗಿಯೇ ಒಂದು ಹಾಡನ್ನು ರೂಪಿಸಿದ್ದರು. ಆಗ ನನಗೆ ಐದು ವರ್ಷ.

◆ **ನಿಮ್ಮ ಆರಂಭದ ಧಾರಾವಾಹಿಗಳಿಗೆ ಇವತ್ತಿನ ಸಂದರ್ಭ ಹೋಲಿಸಿದರೆ, ಏನೆನಿಸುತ್ತದೆ?**

ತುಂಬ ವ್ಯತ್ಯಾಸ ಮತ್ತು ಬದಲಾವಣೆಯನ್ನು ನಾವು ಗುರುತಿಸಬಹುದು. ತುಂಬ ಧನಾತ್ಮಕ ಪರಿಣಾಮವಾಗಿದೆ. ಮೊದಲು 13 ಕಂತುಗಳಲ್ಲೇ ಒಂದು ಕಥೆ ಮುಗಿಯುತ್ತಿತ್ತು. ಹೆಚ್ಚು ಧಾರಾವಾಹಿಗಳು ಅದೇ ಸ್ವರೂಪದಲ್ಲಿ ಬರುತ್ತಿದ್ದವು. ನಂತರವೇ ಮೆಗಾ ಸೀರಿಯಲ್ ಪರಿಚಯ ಆಗಿದೆ. ಈಗ ತಾಂತ್ರಿಕವಾಗಿ ಸಿಕ್ಕಾಪಟ್ಟೆ ವಿಕಾಸವಾಗಿದೆ. ನಿರ್ಮಾಣದ ಗುಣಮಟ್ಟ ನೋಡಿದರೆ ಸಿನಿಮಾಕ್ಕೂ ಸೀರಿಯಲ್‌ಗೂ ವ್ಯತ್ಯಾಸವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಅದ್ದೂರಿಯಾಗಿದೆ. ಕಲಾವಿದರನ್ನು ಬಿಂಬಿಸುವ ವಿಷಯ, ಪ್ರಚಾರಕ್ಕಾಗಿ ಸಿದ್ಧಮಾಡುವ ಪ್ರೋಮೊ ತುಂಬ ಶ್ರೀಮಂತವಾಗಿವೆ. ಪ್ರೋಮೊ ನೋಡಿದರೆ ಇದೇನು ಸಿನಿಮಾನಾ ಅಥವಾ ಧಾರಾವಾಹಿನಾ ಎಂದು ಅಚ್ಚರಿಯಿಂದ ನೋಡಬೇಕು. ಕ್ಯಾಮೆರಾ ಆಧುನಿಕವಾಗಿದೆ. ಹೊಸ ಸಾಧ್ಯತೆಗಳನ್ನು ಬಳಸಿ ಅಪ್‌ಡೇಟ್ ಆಗಿದ್ದು ಒಳ್ಳೆಯದೇ ಆಗಿದೆ. ಇಲ್ಲದೆ ಇದ್ದರೆ ವೀಕ್ಷಕರಿಗೆ ಬೋರ್ ಅನ್ನಿಸುತ್ತಿತ್ತು.

ಬದ್ಧತೆ ಮತ್ತು ಸಮಯ ಪಾಲನೆ ಕಲಾವಿದರಾದ ನಮ್ಮಲ್ಲಿ ಇನ್ನೂ ಬರಬೇಕಿತ್ತು. ಅದು ಸ್ವಲ್ಪ ಕಡಿಮೆ ಎಂದೆನಿಸುತ್ತದೆ. ನಿರ್ದೇಶಕರು ರೆಡಿ ಅಂದ ತಕ್ಷಣ ನಾನು ಕ್ಯಾಮೆರಾ ಮುಂದೆ ನಿಲ್ಲುತ್ತೇನೆ. ಮೊದಲಿನಿಂದಲೂ ಇದನ್ನು ನಾನು ರೂಢಿಸಿಕೊಂಡಿದ್ದೇನೆ. ಕೆಲಸ ಮಾಡುವಾಗ ಏನೋ ಒಂದು ಕೊರತೆ ಎದುರಾಗಬಹುದು. ಅದು ಎಲ್ಲೆಡೆ ಇರುತ್ತದೆ. ಅದನ್ನು ಸರಿದೂಗಿಸಿಕೊಂಡು ಅಭಿನಯ ಮಾಡಬೇಕು. ನಾವು ಬಂದಿರುವುದೇ ಕೆಲಸ ಮಾಡಲು ಎಂದು ಯೋಚಿಸಬೇಕು. ಆ ಪ್ರಾಜೆಕ್ಟ್‌ನ ಭಾಗ ಎಂದು ಭಾವಿಸಿದರೆ ನಮಗೆ ಸಣ್ಣಪುಟ್ಟ ಬೇಡಿಕೆಗಳೂ ನಗಣ್ಯ ಆಗುತ್ತವೆ. ನಮ್ಮ ಬೇಡಿಕೆಗಳನ್ನೇ ಮುಂದುಮಾಡಿಕೊಂಡಿದ್ದರೆ, ಅದರಿಂದ ಬೇರೆಯವರಿಗೂ ತೊಂದರೆ ಆಗುತ್ತದೆ. ಹಾಗಾಗಿ ಬದ್ಧತೆ ತುಂಬ ಮುಖ್ಯ. ನಮ್ಮ ಮನೆಯಲ್ಲಿ ಹೇಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತೇವೋ ಅದನ್ನು ಎಲ್ಲ ಕಡೆ ತೋರಿಸಬೇಕಾಗುತ್ತದೆ.

◆ **'ಕರಿಮಣಿ' ಕಥೆಗೆ ಸಂಬಂಧಿಸಿ ಏನು ಹೇಳುತ್ತೀರಿ?**

ಕಲರ್ಸ್ ಕನ್ನಡದಲ್ಲಿ ಆರು ವರ್ಷದ ಹಿಂದೆ 'ರಕ್ಷಾಬಂಧನ'ದಲ್ಲಿ ಮಾಡಿದ್ದೆ. 'ಕರಿಮಣಿ'ಯ ಅನುರಾಧಾ ಪಾತ್ರಕ್ಕೆ ಅನೇಕ ಶೇಡ್‌ಗಳಿವೆ. ಇದರಲ್ಲಿ ರಾಧಾ ಮೇಡಂ ಎಂದೇ ಪ್ರಸಿದ್ಧಳಾಗಿದ್ದೇನೆ. ನಾಯಕಿಗೆ ಶಿಕ್ಷಕಿ ನಾನಾಗಿದ್ದೇನೆ. ಆಕೆ ನನ್ನ ಬೆಸ್ಟ್ ವಿದ್ಯಾರ್ಥಿನಿ. ಆಕೆಗೆ ನಾನೇ ಸ್ಫೂರ್ತಿಯ ಕೇಂದ್ರ. ತಾಯಿ ಇಲ್ಲದ ಮಗುವಿಗೆ ತಾಯ್ತನವನ್ನು ತುಂಬುವ ಪಾತ್ರ. ಇದು ಭಾವಪ್ರಧಾನವಾಗಿದ್ದು, ಅಭೂತಪೂರ್ವ ಅನುಭವವನ್ನು ಕಟ್ಟಿಕೊಡುತ್ತದೆ. ಈಚೆಗಷ್ಟೇ ಆರಂಭವಾಗಿದೆ. ಕಥೆ ತುಂಬಾ ಚೆನ್ನಾಗಿದೆ. ಸದ್ಯ ಕಥಾನಾಯಕನಿಗೆ, ನಾಯಕಿಯ ಬಗ್ಗೆ ಅಪನಂಬಿಕೆ ಬಂದಿದೆ. ಅವಳ ಮದುವೆ ನಿಲ್ಲಿಸಲು ಮುಂದಾಗುತ್ತಾನೆ. ಅದಾದ ಮೇಲೆ ವಾಸ್ತವ ಅರಿವಿಗೆ ಬಂದಿದೆ. ಯಾವುದೋ ಹುಡುಗಿಯನ್ನು ಇವಳು ಎಂದು ಭಾವಿಸಿ ಹಾಗೆ ಮಾಡಿರುತ್ತಾನೆ. ಅದರಿಂದ ನಾಯಕಿಯ ಮನೆಯಲ್ಲಿ ಸರಣಿಯಂತೆ ತೊಂದರೆಗಳು ಎದುರಾಗುತ್ತವೆ. ಅವಳ ತಂದೆ ಹೃದಯಾಘಾತವಾಗಿ ಆಸ್ಪತ್ರೆ ಸೇರುತ್ತಾರೆ. ನಾಯಕನಿಗೆ ತಪ್ಪಿನ ಅರಿವಾಗಿದೆ. ಮುಂದೆ ತೆರೆಯ ಮೇಲೆ ನೋಡಬೇಕು.

◆ **ನಟನೆಗೆ ಗ್ಲಾಮರ್, ಸೌಂದರ್ಯವೇ ಪ್ರಧಾನ ಅಂಶ ಆಗುತ್ತಿದೆಯೇ?**

ಹಾಗಿಲ್ಲ. ತುಂಬ ಚೆನ್ನಾಗಿದ್ದಾರೆ ಎಂದು ಯಾರೂ ಆಯ್ಕೆ ಮಾಡಿಕೊಳ್ಳುವುದಿಲ್ಲ. ಸಾಕಷ್ಟು ಕಲಾವಿದರು ತರಬೇತಿಯನ್ನು ತೆಗೆದುಕೊಂಡೇ ಬಂದಿರುತ್ತಾರೆ. ಎಲ್ಲದಕ್ಕಿಂತ ಹೆಚ್ಚಾಗಿ ಎಲ್ಲ ಪಾತ್ರಗಳಿಗೂ ಪರೀಕ್ಷೆ ಇದ್ದೇ ಇರುತ್ತದೆ. ನನಗೆ ಹಲವಾರು ವರ್ಷಗಳ ಅಭಿನಯದ ಅನುಭವ ಇದೆ. ಅನೇಕ ಸಿನಿಮಾ, ಧಾರಾವಾಹಿಗಳಲ್ಲಿ ಮಾಡಿದ್ದೇನೆ. ಆದರೂ ನನಗೆ ಫೋಟೊ ಶೂಟ್ ಮಾಡುತ್ತಾರೆ. ವಿಡಿಯೊ ಶೂಟ್ ಮಾಡುತ್ತಾರೆ. ಹಿಂದೆ ನಾವು ಏನೋ ಮಾಡಿರಬಹುದು. ಈ ಪಾತ್ರಕ್ಕೆ ಸೂಕ್ತ ಆಗ್ತೀವಾ ಅನ್ನುವುದು ಮುಖ್ಯ. ಅದಕ್ಕಾಗಿ ಆಡಿಷನ್ ಮಾಡುತ್ತಾರೆ. ಚೆನ್ನಾಗಿದ್ದರೆ ಟೀವಿಯಲ್ಲಿ ಸಿನಿಮಾದಲ್ಲಿ ಬಂದುಬಿಡ್ತೀನಿ ಎನ್ನುವಂತೆ ಇಲ್ಲ. ನಟನೆ ಗೊತ್ತಿರಬೇಕು. ನೋಡಲು ಚಂದ ಕಾಣಬೇಕು. ಎಲ್ಲಕ್ಕಿಂತ ಆ ಪಾತ್ರಕ್ಕೆ ಹೊಂದಿಕೆ ಆಗಬೇಕು. ನಾನು ಹದಿಹರೆಯದ ನಾಯಕಿ ಆಗಬೇಕು ಅಂದರೆ ಅದು ಈಗ ಸಾಧ್ಯವೆ? ಪ್ರಧಾನ ಪಾತ್ರ ಬೇರೆ, ನಾಯಕಿ ಪಾತ್ರ ಬೇರೆ. ಇದರಲ್ಲಿ ನಾನು ಕಥೆಗೆ ಪ್ರಮುಖ ಪಾತ್ರವಹಿಸುವೆ. ಇದರಿಂದಲೇ ನಾಯಕಿಯ ಪಾತ್ರ ಪೋಷಣೆಯಾಗುತ್ತದೆ.

ಟೀವಿಗಳಲ್ಲಿ ದೊಡ್ಡ ಸವಾಲು ಒಂದಿದೆ. ಅದು ಏನು ಅಂದರೆ, ಇವತ್ತಿನ ಪಾತ್ರಧಾರಿಯನ್ನು ನಾಳೆಯೇ ಬದಲಿಸಬಹುದು. ನಿತ್ಯವೂ ಸವಾಲಿನಿಂದ ಕೆಲಸ ಮಾಡಬೇಕು. ಸಿನಿಮಾದಲ್ಲಿ ವಿಮರ್ಶೆ ತೆರೆಕಂಡ ನಂತರವೇ ಸಿಗುತ್ತದೆ. ಧಾರಾವಾಹಿ ಫ್ಯಾಕ್ಟರಿ ರೀತಿ. ನಿತ್ಯವೂ ವೀಕ್ಷಕರ ಟೀಕೆ ಟಿಪ್ಪಣಿ ಎದುರಾಗುತ್ತದೆ. ನಮ್ಮ ಜವಾಬ್ದಾರಿಯನ್ನು ಉಳಿಸಿಕೊಳ್ಳಲು ಬದ್ಧತೆ ಬೇಕಾಗುತ್ತದೆ.

■ **ರಾಘವೇಂದ್ರ ಕೆ.**